ಎಚ್. ನರಸಿಂಹಯ್ಯನಂಥವರು ಕುವೆಂಪು ಅಂಥವರು ಇದ್ದರಲ್ಲ? ಲಾಲಬಹದ್ದೂರ ಶಾಸ್ತ್ರಿ, ಅಬ್ದುಲ್ ಕಲಾಮ್, ಹೋಗಲಿ ನಮ್ಮಲಿಯೇ ಡಿ.ಎಂ. ನಂಜುಡಪ್ಪ ಇರಲಿಲ್ಲವೆ? ವೋಟ್ ಬ್ಯಾಂಕ ರಾಜಕಾರಣ, ಜಾತಿ ಲೆಕ್ಕಾಚಾರದ ರಾಜಕಾರಣ, ಹಣ ಮಾಡುವ ರಾಜಕಾರಣ – ಇವೆಲ್ಲ ಸಾರ್ವಜನಿಕ ಜೀವನವನ್ನು ಕಲುಷಿತಗೊಳಿಸುತ್ತಲಿವೆ. ನಾಗರಿಕತೆಯಲ್ಲಿ ಪಾಶ್ಚಾತ್ಯರ ಅನುಕರಣದ ಅತಿರೇಕಗಳಿವೆ. ಕೌಟುಂಬಿಕ ಸ್ತರ, ಶೈಕ್ಷಣಿಕ ಸ್ತರ ಮತ್ತು ಸಾಂಸ್ಕೃತಿಕ ಸಂಘಸಂಸ್ಥೆಗಳ ಸ್ತರಗಳಲ್ಲಿ ಬಹಳಷ್ಟು ನಮ್ಮತನ ಪ್ರತಿಬಿಂಬಿತವಾಗಬೇಕು. ಪ್ಲಾಸ್ಟಿಕ್ ಬ್ಯಾನ್ ಮಾಡಲು ನಾವು ತೆಗೆದುಕೊಂಡ ಕಾಲವೆಷ್ಟು? ಅಂತರ್ಜಲ ಬತ್ತಿ ಹೋಗುವಷ್ಟು ನಾವು ನಿಸರ್ಗವನ್ನು ಹಾಳು ಮಾಡಿದ್ದೇವೆ. 'Politics without principal ದೊಡ್ಡ ಆತಂಕ' ಎಂದು ಗಾಂಧೀಜಿ ಗುರುತಿಸಿದ್ದರು. ಇಂದು ನಾವು ಇಂಥ ಆಂತಕದಲ್ಲಿಯೇ ಇದ್ದೇವೆ. ಗಾಂಧಿ ಹೆಸರನ್ನು ಮುಂದಿಟ್ಟುಕೊಂಡಿರುವ ರಾಹುಕೇತು ಕೂಡ ಇವೆ, ಬರೀ ಮಾತುಗಾರರೂ ಇದ್ದಾರೆ. ಈಗ ಇಡೀ ದೇಶಕ್ಕೆ ಸೂಕ್ತ ದಿಕ್ಕು ತೋರಿಸುವ ಯುಗಪುರುಷನೊಬ್ಬ ಬೇಕಾಗಿದೆಯೆಂದು ಅನಿಸುತ್ತದೆ.

- **ಮಧುರಚೆನ್ನರ '...ಬಯಕೆ ಬರುವುದರ ಕಣ್ಸನ್ನೆ ಕಾಣೋ' ಹಾಗೂ '...ಪ್ರೀತಿಯಂಥ ವಸ್ತು ಭವದಲ್ಲಿ ಕಾಣೆ; ಮನಗಂಡ ಮಾತು' ನಿತ್ಯ ನಿಮ್ಮ ಬಾಯಲ್ಲಿವೆ...**

ಕೆಲವು ಉಕ್ತಿಗಳಿಗೆ ಚಿರಂತನವಾಗಿ ಬಾಳುವ ಶಕ್ತಿಯಿರುತ್ತದೆ. ನೀವು ನೆನಪಿಸಿದ ಮಧುರಚೆನ್ನರ ಎರಡೂ ಮಾತುಗಳು ಅಂಥವು. ಅವು ಅನುಭಾವಿಕ ಸೂಳ್ನುಡಿಗಳು. ಇವು ಅನುಭವೈಕ ಸಾಕ್ಷಿಕವಾದವುಗಳು.

- **ಪ್ರವೃತ್ತಿ, ವೃತ್ತಿ, ನಡೆ, ನುಡಿ, ಸಂಬಂಧ, ಸಾಹಚರ್ಯೆ, ಕ್ರಿಯೆ, ಸಾಧನೆ, ವಿದ್ಯೆ, ವಿದ್ಯಮಾನ ಹಾಗೂ ಒಟ್ಟಾರೆ ಬದುಕು ಇವೆಲ್ಲವನ್ನೂ ಒಂದು 'ನೋಂಪಿ'ಯಾಗಿಸುವ ಶಕ್ತಿ 'ಅನುಭಾವ'ಕ್ಕಿದೆಯೆ? ಹೇಗೆ?**

ಉದ್ದೇಶರಹಿತವಾದ ಬದುಕು ಅರ್ಥಹೀನವಾದುದು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಮರಾಠಿಯ ವಿ.ಸ. ಖಾಂಡೇಕರ ಅವರು ಮನುಷ್ಯನ ಜೀವನ ಬಗ್ಗೆ ಬರೆಯುತ್ತ, 'ಜನನ, ಶಿಕ್ಷಣ, ನೌಕರಿ, ಲಗ್ನ, ಮಕ್ಕಳು ಕಾಯಿಲೆ, ಮರಣ ಇವೇ ಅವನ ಸಪ್ತಪದಿ' ಎಂದಿದ್ದಾರೆ. ಇದು ನಿಜ ತಾನೇ? ನಮ್ಮ ಜೀವನಕ್ಕೆ ಅರ್ಥಬರಬೇಕಾದರೆ 'ನೋಂಪಿ' ತಳೆಯಬೇಕಾಗುತ್ತದೆ. ಏನನ್ನಾದರೂ ಸಾಧಿಸಬೇಕಾಗುತ್ತದೆ. ವಿಜ್ಞಾನಿಗಳು, ಕಲಾವಿದರು ಸಮಾಜಸುಧಾರಕರು, ದೇಶಭಕ್ತರು, ಸಂತರು ಇವರೆಲ್ಲ 'ನೋಂಪಿ' ತಳೆದವರೆ. ಅನುಭಾವ ಎಂಬದು ಹೊರಗೆಲ್ಲಿಯೂ ಇಲ್ಲ. ಅದು ನಮ್ಮೊಳಗೇ ಇದೆ. ಅದರ ಕೇಂದ್ರ ಬಿಂದು ನೋಂಪಿ. ಅಷ್ಟೆ.

## ಬಸವರಾಜ ಸಾದರ

ಸಂದರ್ಶಕ ಬಸವರಾಜ ಸಾದರ ಆಕಾಶವಾಣಿಯಲ್ಲಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರು. 'ತಪ್ಪಂಡ' (ಕಥಾಸಂಕಲನ), 'ಸಿಸಿಫಸ್‌ರ ಸುತ್ತು', 'ಬುದ್ಧನ ಭಿಕ್ಷಾಪಾತ್ರೆ' (ಕವನ ಸಂಕಲನಗಳು), 'ಅನುಮಿತಿ' (ವಿಮರ್ಶೆ), 'ಮೃದುವಾಗಿ ಮುಟ್ಟು', 'ತಮಂಧಕ್ಕೆ ಬೆಳಗು', 'ಹೊಸ ಆಲೋಚನೆ' (ವೈಚಾರಿಕ ಪ್ರಬಂಧಗಳ ಸಂಗ್ರಹಗಳು) – ಅವರ ಕೃತಿಗಳು. 'ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು' ಅವರ ಪಿಎಚ್. ಡಿ. ಪ್ರಬಂಧವಾಗಿದೆ.